CLOCK TOWERS IN BANGALORE CITY

146. Sri K. R. Srinivasulu Nayudu (Shanthinagar).—

Will the Minister for Municipal Administration be pleased to state.—

whether there is any proposal before the Government to construct Clock Towers at important busy places in Bangalore City ?

Sri B. Basavalingappa (Minister for Municipal Administration).—

No.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು :—(ಆ) ಪ್ರಶ್ನೆಗೆ ಉತ್ತರವಾಗಿ 'ಇಲ್ಲ' ಎಂದು ಹೇಳಿದೆ. ಸಾಧಾರಣವಾಗಿ ಎಂಟ್ಲುಗಳಲ್ಲಿ ಹಾಗೂ ಕೆಲವಾರು ಚರ್ಚ್‌ಗಳಲ್ಲಿ ಬೆಲ್ ಹೊಡೆದ ತಕ್ಷಣ ಜನರು ಕೆಲಸ ಕಾರ್ಯಗಳಿಗೆ ಹೋಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

† ಶ್ರೀ ಬಿ. ಬಸವಲಿಂಗಪ್ಪ :—ಅದು ನಮ್ಮ ಗಮನಕ್ಕೆ ಬರುವ ವಿಷಯವಲ್ಲ. ಅದು ಕಾರ್ಪೊರೇಷನ್ನಿಗೆ ಬರತಕ್ಕ ವಿಷಯ. ಮಾನ್ಯ ಸದಸ್ಯರು ಈಗ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡಲಾಗುತ್ತದೆ.

FAILURE OF MUNGARI AND HINGARI CROPS IN SIRUGUPPA TALUK

167. Sri B. E. Ramaiah (Siruguppa).—Will the Minister for Revenue be pleased to state :—

(*a*) whether the Government is aware that the Mungari and Hingari crops have completely failed in Siruguppa taluk due to scant rainfall ;

(*b*) whether the Government has taken measures for remission of land revenue ;

(*c*) whether the Government intend to advance takavi loans to the ryots of Siruguppa taluk by postponing collections of old takkavi loans ;

(*d*) whether the Government intend to take up relief measures to wipe out the difficulties of the agricultural labourers of the taluk?

Sri H, M. Channabasappa (Minister for Public Works and Electricity). (on behalf of)

SRI N. HUTCHAMASTHY GOWDA. (Minister for Revenue)

(*a*) No.

(*b*) Local Officers will examine the proposals as per rules afte reviewing the yield of rabi crops.

(*c*) No.

(*d*) 19 Road works in tais taluk has been proposed to be taken up for execution.

ಶ್ರೀ ಬಿ. ಇ. ರಾಮಯ್ಯ :—(ಅ) ಪ್ರಶ್ನೆಗೆ ಉತ್ತರವಾಗಿ ಗೊತ್ತಿಲ್ಲವೆಂದು ಹೇಳಿದ್ದೀರಿ. ಆ ರೀತಿ ಗೊತ್ತಿಲ್ಲವೆಂದರೇನು ?

† ಶ್ರೀ ಎಚ್. ಎಂ. ಚನ್ನಬಸಪ್ಪ :—ಈಗ ಹಿಂಗಾರು ಮತ್ತು ಮುಂಗಾರು ಬೆಳೆಗಳ ಬಗ್ಗೆ ಮಾಹಿತಿ ಕೇಳಿದ್ದೀರಿ. ನನ್ನಲ್ಲಿ ಮುಂಗಾರು ಬೆಳೆಯ ಮಾಹಿತಿ ಇದೆ. ಹಿಂಗಾರು ಬೆಳೆಗಳ ಸಂಪೂರ್ಣ ಮಾಹಿತಿ ಈಗ ನನ್ನಲ್ಲಿಲ್ಲ.

ಶ್ರೀ ಬಿ. ಇ. ರಾಮಯ್ಯ :—ಈಗಾಗಲೇ ಹಿಂಗಾರು ಬೆಳೆ ಕಳೆದುಹೋಗಿ ಬರಬೇಕಾದ ಬೆಳೆ ಬರಲ್ಲಿಲ್ಲ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಅದು ನನ್ನಲ್ಲಿಲ್ಲ.

ಶ್ರೀ ಬಿ. ಇ. ರಾಮಯ್ಯ ;—ಈ ಮಾಹಿತಿಯನ್ನು ಯಾವಾಗ ತರಿಸುತ್ತೀರಿ? ಇನ್ನು ಎಷ್ಟು ದಿವಸಗಳು ಬೇಕಾಗುತ್ತವೆ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಸರ್ಕಾರ ಈ ವಿಷಯದಲ್ಲಿ ಏನೇನು ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಬೇಕೋ ಅವೆಲ್ಲವನ್ನೂ ತೆಗೆದುಕೊಳ್ಳುತ್ತದೆ. ಈಗ ಏನು ನಡೆಯುತ್ತದೆ ಎಂಬುದು ಇನ್ನು ಸ್ವಲ್ಪ ದಿವಸಗಳಲ್ಲಿ ಬರುತ್ತದೆ.

ಶ್ರೀ ಬಿ. ಇ. ರಾಮಯ್ಯ :—(ಈ)ಗೆ ಉತ್ತರದಲ್ಲಿ ೧೯ ರಸ್ತೆ ಕಾಮಗಾರಿಗಳನ್ನು ತೆಗೆದು ಕೊಂಡಿದ್ದೇವೆಂದು ಹೇಳಿದ್ದೀರಿ. ಈ ೧೯ ಕಾಮಗಾರಿಗಳು ಮುಂಗಿದು ೩ ತಿಂಗಳುಗಳಾಗಿವೆ. ಅಂದ ಮೇಲೆ ಈಗ ಕೆಲಸವಿಲ್ಲವೆಂದು ಅಲ್ಲಿನ ಜನರು ಸರ್ಕಾರಕ್ಕೆ ಮನವಿಮಾಡಿದ್ದಾರೆಯೇ ?

ಶ್ರೀ ಡಿ. ದೇವರಾಜ್ ಅರಸ್ :—ಅಲ್ಲಿ ಕೆಲಸವಿಲ್ಲದೆ ಹೋದರೆ ಕೃಷ್ಣಾ ಪ್ರಾಜೆಕ್ಟ್ ಕಾಲುವೆ ಕೆಲಸ ಪ್ರಾರಂಭಮಾಡುತ್ತೇವೆ. ತುಂಗಭದ್ರಾದಲ್ಲಿ ಕೆಲಸ ಪ್ರಾರಂಭಮಾಡುತ್ತೇವೆ. ಅಂತಹವರು ಅಲ್ಲಿಗೆ ಬರಬಹುದು.

ಶ್ರೀ ಬಿ. ಇ. ರಾಮಯ್ಯ :—ಅಲ್ಲಿಯ ಜಿಲ್ಲಾಧಿಕಾರಿಗಳು ಒಂದು ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿ ಕಳುಹಿಸಿದರೆ ಆ ಕೆಲಸಗಳನ್ನು ಯಾವಾಗ ಶುರು ಮಾಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಎಲ್ಲಾ ಕಾರ್ಯಕ್ರಮಗಳನ್ನೂ ಒಂದೇಸಾರಿ ಶುರು ಮಾಡುವುದಕ್ಕಾಗುವುದಿಲ್ಲ. ರಿಲೀಫ್ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ವರದಿ ಬಂದರೆ ತೆಗೆದುಕೊಳ್ಳುತ್ತೀಣ.

ಶ್ರೀ ಕಾಗೋಡು ತಿಮ್ಮಪ್ಪ :—ಬರಗಾಲ ಕಾಲದಲ್ಲಿ ಕೆಲಸಗಳು ಯಾರಿಗೆ ಇಲ್ಲವೋ ಅವರಿಗೆ ಕೆಲಸಗಳನ್ನು ಒದಗಿಸುತ್ತೇವೆಂದು ಮಂತ್ರಿಗಳು ಹೇಳಿದ್ದರು. ಆ ಪ್ರಕಾರ ಎಲ್ಲೆಲ್ಲಿ ಕೆಲಸಗಳನ್ನು ಈಗ ಒದಗಿಸಿಕೊಡುತ್ತೀರಿ?

SRI H. M. CHANNABASAPPA.—I have promised to place a list of places where work will be available and the same will be placed in due course.

ಶ್ರೀ ಕಾಗೋಡು ತಿಮ್ಮಪ್ಪ :—ಸಿರುಗುಂಪ್ಪದ ಕೆಲವು ಭಾಗಗಳಲ್ಲಿ ಯಾವ ಕೆಲಸಗಳೂ ಇಲ್ಲದೆ ತುಂಬಾ ತೊಂದರೆಯಾಗಿರುವುದರಿಂದ, ಅಲ್ಲಿನ ಜನರಿಗೆ ಸೂಕ್ತ ಕೆಲಸಗಳನ್ನು ಕೊಡಲು ವ್ಯವಸ್ಥೆಮಾಡುತ್ತೀರಾ? ಏಕೆಂದರೆ ಅದನ್ನು ಬೇರೆ ಬರಗಾಲದ ಪ್ರದೇಶಗಳ ಜೊತೆಯಲ್ಲಿ ಸೇರಿಸಿಲ್ಲ ಆದ್ದರಿಂದ ಅಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ .—ನಾನು ಮೊದಲೇ ಹೇಳಿದ್ದೇನೆ. ಡೆಪ್ಯುಟಿ ಕಮಿಷನರ್ ಅದೇಶದ ಪ್ರಕಾರ ಖಾರಿಫ್ ಮತ್ತು ರಬಿ ಬೆಳೆ ಬಂದಾಗ ಅಲ್ಲಿಯೂ ಎಲ್ಲಾ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ. ಅಲ್ಲಿನವರಿಗೆ ಕೆಲಸಗಳನ್ನೂ ಸಹ ಕೊಡುತ್ತೇವೆ.

ಶ್ರೀ ಬಿ. ಇ. ರಾಮಯ್ಯ—ನಮ್ಮ ಸಿರಗುಪ್ಪ ತಾಲ್ಲೂಕ್‌ನಲ್ಲಿ ಸುಮಾರು ೧೫ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ ಎಂದು ಅಲ್ಲಿಯ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರು ಸರ್ಕಾರಕ್ಕೆ ಏನು ತಿಳಿಸಿದ್ದಾರೆ, ಅವುಗಳನ್ನು ಆದರೂ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು)—ನಮ್ಮ ದೇಶದಲ್ಲಿರತಕ್ಕಂಥ ಎಲ್ಲ ಲಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ಒಂದೇ ಸಲ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತು ಸಿರಗುಪ್ಪ ತಾಲ್ಲೂಕಿನಲ್ಲಿ ೧೫ ಲಿಫ್ಟ್ ಇರಿಗೇಷನ್ ಸ್ಕೀಮ್‌ಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡಿದ್ದರೆ ಅಷ್ಟನ್ನೂ ಒಂದೇ ಸಲ ತೆಗೆದುಕೊಳ್ಳುವುದು ಸಾಧ್ಯವಲ್ಲ.

LUXURY BUS FROM BANGALORE TO Y. N. HOSKOTE

218. SRI R. CHIKKIAH (Madhugiri)—Will the Minister for Labour be pleased to:—

(*a*) whether it has come to the notice of the Government the necessity of running a Luxury or Express bus from Bangalore to Y. N. Hoskote *via* Tumkur, Madhugiri and Pavagada;

(*b*) if so, the action taken in that behalf?

SRI AZEEZ SAIT (Minister of Labour)

(*a*) No.

(*b*) Does not arise in view of the reply to clause (*a*)

ಶ್ರೀ ಆರ್. ಚಿಕ್ಕಯ್ಯ—ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತಿದ್ದೀರಿ. ತುಮಕೂರು, ಮಧುಗಿರಿ, ಪಾವಗಡ ಕ್ಷೇತ್ರದ ಶಾಸಕರು ತಮ್ಮ ಬಳಿ ಖುದ್ದು ಬಂದು ಈ ಬಗ್ಗೆ ವಿನಂತಿ ಮಾಡಿಕೊಂಡಿರುವುದಲ್ಲದೆ ಪತ್ರವನ್ನು ಸಹ ಬರೆದಿದ್ದಾರೆ. ಅದಕ್ಕೆ ಉತ್ತರ ಸಹ ಬಂದಿದೆ ಎಂಬುದು ತಮಗೆ ಗೊತ್ತಿದೆಯೇ?

† ಶ್ರೀ ಅಜೀಜ್ ಸೇಟ್—ನನ್ನ ಗಮನಕ್ಕೆ ಬಂದಿದೆ. ಪ್ರಯತ್ನ ಮಾಡುತ್ತಿದ್ದೇವೆ. ಅವರ ದುರದೃಷ್ಟ, ಅವರ ಪರ್ಮಿಟ್ ಅಪ್ಲಿಕೇಷನ್ನನ್ನು ಆರ್. ಟಿ. ಎ. ಅವರು ರಿಜೆಕ್ಟ್ ಮಾಡಿದ್ದಾರೆ. ಮುಂದೆ ಯಾವ ರೀತಿ ಸಹಾಯ ಮಾಡಬಹುದು ಎಂಬುದನ್ನು ಪರಿಶೀಲನೆ ಮಾಡುತ್ತಿದ್ದೇನೆ.

PURCHASE OF CHASSIS BY MYSORE STATE ROAD TRANSPORT CORPORATION

251. SRI ANDANAIH (Kunigal)—Will the Minister for Labour be pleased to state:—

(*a*) the number of chassis booked by the Mysore State Road Transport Corporation authorities or by the Government.

(*b*) the lowest and highest tenders received in that connection;

(*c*) the amount required for the purchase of the chassis?